ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನಾ) 1973 ರ ಕಲಂ 3ರ ಪ್ರಕಾರ ಯಾವುದೇ ಕೊಳಚೆ ಪ್ರದೇಶವು ತಗ್ಗಿನಲ್ಲಿರುವುದು, ಅನೈರ್ಮಲ್ಯಕರ, ಹೊಲಸು, ಮಿತಿಮೀರಿದ ಜನ ಸಂದಣಿ ಪ್ರದೇಶ ಅಥವಾ ಅದರ ನೆರೆಹೊರೆಯ ಸಾರ್ವಜನಿಕ ಆರೋಗ್ಯ ಸುರಕ್ಷೆ ಅಥವಾ ಅನುಕೂಲಕ್ಕೆ ಯಾವುದೇ ಪ್ರದೇಶವು ಅಪಾಯದ ಮೂಲವಾಗಿದೆ ಅಥವಾ ಮೂಲವಾಗುವ ಸಂಭವವಿದೆ. ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳು, ಕಟ್ಟಡಗಳ ಜನನಿಬಿಡತೆ, ದೋಷಪೂರ್ಣ ವ್ಯವಸ್ಥೆ ಮತ್ತು ವಿನ್ಯಾಸ, ಬೀದಿಗಳು ಇಕ್ಕಟ್ಟಾಗಿರುವುದು, ದೀಪ ಅಥವಾ ನೈರ್ಮಲ್ಯ ಸೌಲಭ್ಯಗಳ ಅಭಾವ ಅಥವಾ ಈ ಸಂಬಂಧಗಳ ಪ್ರಕಾರದಿಂದ ಸುರಕ್ಷೆ, ಆರೋಗ್ಯ ಮತ್ತು ನೀತಿಗೆ ಹಾನಿಕಾರವೆಂದು ಮನದಟ್ಟಾದಲ್ಲಿ ಅಂತಹ ಪ್ರದೇಶಗಳನ್ನು ಅಧಿಸೂಚನೆಯ ಮೂಲಕ ಕೊಳಚೆ ಪ್ರದೇಶಗಳೆಂದು ಘೋಷಿಸಬಹುದು.

ಆ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಇತ್ತೀಚೆಗೆ ನಡೆಸಿದ ಸಮೀಕ್ಷೆ ಪ್ರಕಾರ ಬಾದಾಮಿ ಪಟ್ಟಣದಲ್ಲಿ 10 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು, ಘೋಷಿಸಬೇಕಿರುತ್ತದೆ. ಮತ್ತು ಕೆರೂರು ಪಟ್ಟಣದಲ್ಲಿ 6 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು ಇವುಗಳನ್ನು ಘೋಷಿಸಲಾಗಿರುತ್ತದೆ. ಕೆರೂರು ಪಟ್ಟಣದ ಹರಿಜನ ಕೇರಿ–ಹರಣ ಶಿಕಾರಿ–ಕೊರವರ ಗಲ್ಲಿ ಮತ್ತು ವಾಲ್ಮೀಕಿ ಗಲ್ಲಿ ಕೊಳಚೆ ಪ್ರದೇಶಗಳಿಗೆ ಇದುವರೆವಿಗೂ ಕುಡಿಯುವ ನೀರು, ಚರಂಡಿ, ರಸ್ತೆ ಮತ್ತು ಬೀದಿದೀಪ ಒದಗಿಸುವ ಕಾಮಗಾರಿಯನ್ನು ರೂ. 3.01 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

ಪ್ರಸಕ್ತ 1996-97ನೇ ಸಾಲಿನಲ್ಲಿ ಕೆರೂರು ಪಟ್ಟಣದ ಮುಜಗೇರಿ–ಭಜಂತ್ರಿ–ಗೊಂಧಳಿಗಲ್ಲಿ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮೂಲಭೂತ ಸೌಕರ್ಯಗಳಾದ ಚರಂಡಿ, ರಸ್ತೆಗೆ ಫರಸಿ, ನೆಲಹಾಸು ಹಾಗೂ ಬೀದಿ ದೀಪ ಇವುಗಳನ್ನು ಒದಗಿಸಲು 1.50 ಲಕ್ಷ ರೂ. ಗಳನ್ನು ಕ್ರಿಯಾ ಯೋಜನೆಯಲ್ಲಿ ಒದಗಿಸಲಾಗಿದೆ. ಇದಲ್ಲದೆ ವಿಶೇಷ ಘಟಕ ಯೋಜನೆಯಡಿಯಲ್ಲಿ ಮತ್ತು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಬರುವ ಅನುದಾನದ ಲಭ್ಯತೆಯ ಮೇರೆಗೆ ಅಭಿವೃದ್ಧಿ ಯೋಜನೆಗಳ ಬಗ್ಗೆ ಕ್ರಿಯಾ ಯೋಜನೆಯನ್ನು ರೂಪಿಸಲಾಗುವುದು.

ವಿಷಯ:- ವಿಜಾಪುರ ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಿಸಿದ ಮನೆಗಳು.

1439 (2394) **ಶ್ರೀ ಬಸವನಗೌಡ ರಾ. ಪಾಟೀಲ (ವಿಜಾಪುರ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ನಗರದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ? ಯಾವ ಯಾವ ಪ್ರದೇಶಗಳಲ್ಲಿ ನಿರ್ಮಿಸಲಾಗಿದೆ?

ಆ) ವಿಜಾಪುರ ನಗರದಲ್ಲಿ ಪ್ರಸಕ್ತ ವರ್ಷದಲ್ಲಿ ಮಂಡಳಿಯಿಂದ ಕೊಳಚೆ ಪ್ರದೇಶಗಳ ನಿವಾಸಿಗಳು ವಸತಿ ನಿರ್ಮಿಸುವ ಉದ್ದೇಶ ಇದೆಯೇ?

ಇ) ಈ ಯೋಜನೆಗಾಗಿ ನಿಗದಿ ಪಡಿಸಿದ ಹಣ ಎಷ್ಟು? ಈ ಕಾರ್ಯ ಪೂರ್ತಿಯಾಗುವುದು ಯಾವಾಗ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ವಿಜಾಪುರ ನಗರದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯಿಂದ 1996ರ ಮಾರ್ಚ್ ಅಂತ್ಯದವರೆಗೆ 137 ಮನೆಗಳನ್ನು ನಿರ್ಮಿಸಲಾಗಿದೆ, ಅಂದರೆ:-

1)	ಕುಂಚಿ ಕೊರವರ ಓಣಿ ಕೊಳಚೆ ಪ್ರದೇಶ ಹಂತ 1 ಮತ್ತು 2	-	57
2)	ಪೈಲ್‌ವಾನ್‌ಗಲ್ಲಿ ಕೊಳಚೆ ಪ್ರದೇಶ ಹಂತ 1 ಮತ್ತು 2	-	80
	ಒಟ್ಟು ಮನೆಗಳು		137

ಆ) ಸಧ್ಯಕ್ಕೆ ಇರುವುದಿಲ್ಲ. ಆದರೆ ನಗರಸಭೆಯವರು ಖಾಲಿ ಜಾಗವನ್ನು ಆಗತ್ಯಕ್ಕೆ ತಕ್ಕಂತೆ ಒದಗಿಸಿ ಕೊಟ್ಟಿಲ್ಲ, ಮತ್ತು ವಿಶೇಷ ಘಟಕ ಯೋಜನೆಯಡಿಯಲ್ಲಿ ಅನುದಾನ ಲಭ್ಯವಾದಲ್ಲಿ ಕೊಳಚೆ ನಿವಾಸಿಗಳಿಗೆ ಮನೆಗಳನ್ನು ನಿರ್ಮಿಸುವ ಯೋಜನೆಯ ಬಗ್ಗೆ ಕಾರ್ಯಕ್ರಮವನ್ನು ರೂಪಿಸಿಕೊಳ್ಳ-ಲಾಗುವುದು.

ಇ) ಉದ್ಭವಿಸುವುದಿಲ್ಲ.

ವಿಷಯ:- 1996-97ನೇ ಸಾಲಿನಲ್ಲಿ ವಿಜಾಪುರ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ-ಯಿಂದ ವಸತಿ ಗೃಹಗಳನ್ನು ನಿರ್ಮಿಸಿರುವುದರ ಕುರಿತು.

1440 (2393) **ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ 1996-97 ರಲ್ಲಿ ನಿರ್ಮಿಸಲು ಸರ್ಕಾರ ನಿರ್ಧರಿಸಿದ ವಸತಿ ಗೃಹಗಳ ಸಂಖ್ಯೆ ಎಷ್ಟು? (ನಗರವಾರು ಮಾಹಿತಿ ನೀಡುವುದು)?

ಆ) ಬಿಜಾಪುರ ನಗರದಲ್ಲಿ ಪ್ರಸಕ್ತ ವರ್ಷದಲ್ಲಿ ಕಡಿಮೆ ಮತ್ತು ಮಧ್ಯಮ ಆದಾಯವರ್ಗಗಳ ಮನೆಗಳನ್ನು ನಿರ್ಮಿಸಲು ನಿರ್ಧರಿಸಿದೆಯೇ?

ಇ) ಅಂತಹ ಮನೆಗಳನ್ನು ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿಯ ಪೇಟೆಯಲ್ಲಿ ದಲ್ಲಾಳಿ-ಗಳ ಆಂಗಡಿಗಳಲ್ಲಿ ದುಡಿಯುವ ಲೆಕ್ಕ ಬರೆಯುವವರು ಗುಮಾಸ್ತರು, ಸಹಾಯಕರಿಗೆ ವಿಶೇಷ ಅವ-ಕಾಶ ಮಾಡಲು ಸರಕಾರದವರು ಯೋಜಿಸುವರೇ?